ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ರಾಮದಾಸ್‌ರವರು ಕೇಳಿರುವ ಮುಖ್ಯ ವಿಷಯ ಏನೆಂದರೆ, ಬೆಂಗಳೂರು ಮತ್ತು ಮೈಸೂರು ಜೈಲುಗಳಲ್ಲಿ ಶಿಕ್ಷೆಗೆ ನಿರ್ಧಾರ ಮಾಡಿದಂಥವರ ಸಂಖ್ಯೆ ಜಾಸ್ತಿ ಇದೆ. ಬೆಳಗಾವಿ ಅಥವಾ ಬಳ್ಳಾರಿಗೆ ಇವರನ್ನು ವರ್ಗಾಯಿಸಬಹುದು. ಆದರೆ, ಬೇರೆ ಬೇರೆ ಕಾರಣಗಳಿಂದ ಒತ್ತಡಗಳಿಂದ ಇವರು ಬೆಂಗಳೂರು, ಮೈಸೂರಿನಲ್ಲಿ ಇರುವುದಕ್ಕೆ ಬಯಸುತ್ತಿದ್ದಾರೆ. ಅದ್ದರಿಂದ, ಶಿಕ್ಷೆ ಆದಂಥವರಿಗೆ ಇವರನ್ನು ಬಲವಾಗಿ ಬಳ್ಳಾರಿಗೆ, ಬೆಳಗಾವಿಗೆ ಕಳುಹಿಸುವುದಕ್ಕೆ ಏನು ತೊಂದರೆ?

ಶ್ರೀ ಡಿ.ಬಿ. ಚಂದ್ರೇಗೌಡ : ಈ ರೀತಿ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಸಾಧ್ಯನಾ? ನಾನು ಕೂಡ ಜೈಲಿಗೆ ಹೋಗಿ ಬಂದಿದ್ದೇನೆ, ಅಲ್ಲಿ ಏನು ಶಿಫಾರಸ್ಸು ನಡೆಯುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಜೈಲಿನಲ್ಲಿ ನಿಂತುಕೊಂಡು ಮೊಬೈಲ್‌ನಲ್ಲಿ ಮಾತನಾಡಿ ಎಂಥೆಂಥ ವ್ಯವಹಾರವನ್ನು ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ರಾಜ್ಯದಲ್ಲಿ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಪ್ರತಿದಿವಸ ಬಿರಿಯಾನಿ ಹೊರಗಡೆಯಿಂದ ತರಿಸಿಕೊಂಡು ಊಟ ಮಾಡತಕ್ಕಂಥ ಪರಿಸ್ಥಿತಿ ಜೈಲಿನಲ್ಲಿ ಇದೆ. ಬೇರೆ ಜೈಲಿಗೆ ಕಳುಹಿಸುವುದಕ್ಕೆ ಸರ್ಕಾರ ಸಿದ್ದವಿದೆಯೇ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ : ಕನ್‌ವಿಕ್ಷನ್ ಆದ ಮೇಲೆ ಕೇಂದ್ರ ಬಂಧೀಖಾನೆಯಲ್ಲಿ ಇಡುತ್ತೇವೆ. ಅವರು ಊಟದಲ್ಲಾಗಲಿ, ವ್ಯವಸ್ಥೆಯಾಗಲಿ, ಬದಲಾವಣೆಯಾಗಲಿ ಎನ್ನುವ ಬೇಡಿಕೆ ಇಡುತ್ತಾರೆ. ಹೀಗಾಗಿ ಹೆಚ್ಚು ಜನ ಸೆಂಟ್ರೆಲ್ ಜೈಲಿನಲ್ಲಿ ಇಡಬೇಕು ಎನ್ನುವ ಅವರ ಅಭಿಪ್ರಾಯದ ಮೇರೆಗೆ ಅವರನ್ನು ಅಲ್ಲಿ ಇಡತಕ್ಕಂಥ ಕೆಲಸ ಮಾಡಿದ್ದೇವೆ. ಬೇರೆ ಜೈಲಿಗೆ ಕಳುಹಿಸಬಾರದು ಎನ್ನುವ ಉದ್ದೇಶ ನಮಗಿಲ್ಲ.

ಕೊಪ್ಪಳ ಜಿಲ್ಲೆಯಲ್ಲಿ ದರೋಡೆ ಸುಲಿಗೆ ಪ್ರಕರಣಗಳ ಕುರಿತು

239 (2513) **ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)** :

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1999-2000ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರ ಇದನ್ನು ತಡೆಯಲು ಯಾವ ಕ್ರಮ ಕೈಗೊಂಡಿದೆ ಮತ್ತು ಸದರಿ ಸಾಲಿನಲ್ಲಿ ದರೋಡೆ, ಸುಲಿಗೆ ಹಾಗೂ ಸಾವುಗಳು ಎಷ್ಟು ನಡೆದಿದೆ; (ವಿವರಗಳನ್ನು ಒದಗಿಸುವುದು)

(ಆ) ಸದರಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳಿಗೆ ಹೊರ ರಾಜ್ಯದ ಮಾಫೀಯಾ ಗುಂಪಿನ ಕೈವಾಡವೇನಾದರೂ ಇದೆಯೇ ಇದ್ದರೆ ಇಲಾಖೆ ಕೈಗೊಂಡ ಕ್ರಮವೇನು;

(ಇ) ಕೊಪ್ಪಳ ಜಿಲ್ಲೆಯು ಇತ್ತೀಚೆಗಷ್ಟೇ ಹೊಸ ಜಿಲ್ಲೆಯಾಗಿ ಪರಿವರ್ತನೆಗೊಂಡಿದ್ದು ಜಿಲ್ಲಾ ಕೇಂದ್ರವಾದ ಕೊಪ್ಪಳದಲ್ಲಿ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ಮತ್ತು ಈ ಸಾಲಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಅ) ಬಂದಿದೆ.

ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ	ವರ್ಷ	ದರೋಡೆ ಪ್ರಕರಣಗಳು	ಸುಲಿಗೆ ಪ್ರಕರಣಗಳು	ಸಂಶಯಾಸ್ಪದ ಸಾವಿನ ಪ್ರಕರಣಗಳು
1.	1999	10	3	12
2.	2000 (9-4-2000 ವರೆವಿಗೆ)	1	-	4

ತೆಗೆದುಕೊಂಡ ಕ್ರಮ

1. ಜಿಲ್ಲೆಯಾದ್ಯಂತ ಗಸ್ತನ್ನು ಬಿಗಿಗೊಳಿಸಲಾಗಿದೆ.
2. ರಾತ್ರಿಯಲ್ಲಿ ವಾಹನಗಳನ್ನು ಪೊಲೀಸ್ ಗಸ್ತಿನೊಂದಿಗೆ ಒಟ್ಟೊಟ್ಟಿಗೆ ಕಳಿಸಲಾಗುತ್ತಿದೆ.
3. ಜಿಲ್ಲೆಯಲ್ಲಿ ವೈ.ಎಸ್.ಪಿ. ಕೊಪ್ಪಳ ಮತ್ತು ಡಿ.ವೈ.ಎಸ್.ಪಿ, ಗಂಗಾವತಿ ನೇತೃತ್ವದಲ್ಲಿ ಡಕಾಯಿತಿ ನಿರೋಧಕ ದಳಗಳನ್ನು ರಚಿಸಲಾಗಿದೆ.
4. ಹೊರವಲಯದಲ್ಲಿ ಒಂಟಿ ಮನೆಗಳಿಗೆ ಸೈರನ್‌ಗಳನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ.
5. ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣ ಡಾಬಾ ಮತ್ತು ಹೋಟೆಲ್‌ಗಳ ಹತ್ತಿರ ಸಂಶಯಾಸ್ಪದವಾಗಿ ಓಡಾಡುವ ಅಪರಿಚಿತ ವ್ಯಕ್ತಿಗಳ ಮೇಲೆ ನಿಗಾ ಇಡಲಾಗಿದೆ.
6. ಕಳ್ಳತನ ಮಾಲುಗಳನ್ನು ತೆಗೆದುಕೊಳ್ಳುವವರ ಮೇಲೆ ನಿಗಾ ವಹಿಸಲಾಗುತ್ತಿದೆ.
7. ಹಳ್ಳಿಗಳಲ್ಲಿ ಗ್ರಾಮ ರಕ್ಷಣಾ ದಳಪತಿಗಳಿಗೆ ತಿಳುವಳಿಕೆ ನೀಡಿ ಚುರುಗುಗೊಳಿಸಲಾಗುತ್ತಿದೆ.
8. ಗ್ರಾಮಾಂತರ ಪ್ರದೇಶಗಳಲ್ಲಿ ಗಸ್ತು ವ್ಯವಸ್ಥೆಯನ್ನು ಬಲಪಡಿಸಲಾಗಿದೆ.

(ಆ) ಇಲ್ಲ.

(ಇ) ಸದ್ಯಕ್ಕೆ ಸಂಚಾರಿ ಪೊಲೀಸ್ ಠಾಣೆ ಇರುವುದಿಲ್ಲ. ಸಂಚಾರಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯ ಪರಿಶೀಲನೆಯಲ್ಲಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನನ್ನ ಆ ಪ್ರಶ್ನೆಗೆ ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಸಂಶಯಾಸ್ಪದ ಸಾವಿನ ಬಗ್ಗೆ ಸಂಪೂರ್ಣವಾದ ವರದಿ ಈ ಉತ್ತರದಲ್ಲಿ ಇಲ್ಲ. ಹೀಗಾಗಿ ಇದಕ್ಕೆ ಸ್ಪಷ್ಟವಾದ ಉತ್ತರ ನೀಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದೆ. ಸಂಶಯಾಸ್ಪದ ಸಾವಿನ ಪ್ರಕರಣದಲ್ಲಿ 1999ರಲ್ಲಿ 12, ಈ ಸಾಲಿನಲ್ಲೂ ಕೂಡ 4

ಪ್ರಕರಣಗಳು ಆಗಿವೆ. ಇದಕ್ಕೆ ಯಾವ ರೀತಿ ಕ್ರಮ ತೆಗೆದುಕೊಂಡಿದೆ ಎಂಬುದನ್ನು ಕೂಡ ಸರ್ಕಾರಿ ಉತ್ತರದಲ್ಲಿ ಕೊಟ್ಟಿದೆ. ಆದ್ದರಿಂದ, ನಿರ್ದಿಷ್ಟವಾಗಿ ಸಂಶಯಾಸ್ಪದ ಯಾವ ರೀತಿ ಆಯಿತು? ಹೇಗೆ ಆಯಿತು? ಯಾವ ಸಂದರ್ಭದಲ್ಲಿ ಆಯಿತು? ಎನ್ನುವುದರ ಬಗ್ಗೆ ನಿಮಗೆ ಅನುಮಾನ ಇದ್ದು ಇದರ ಬಗ್ಗೆ ಉತ್ತರ ಬೇಕು ಎಂದು ಹೇಳುವುದಾದರೆ ಬೇರೆ ಪ್ರಶ್ನೆ ಕಳುಹಿಸಿಕೊಡಿ ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನನಗೆ ಅನುಮಾನ ಬಂದಿದ್ದರಿಂದಲೇ ಈ ಪ್ರಶ್ನೆಯನ್ನು ನಾನು ಕೇಳುತ್ತಿರುವುದು, ಪುನಃ ಇವರು ಪ್ರಶ್ನೆ ಕೇಳಬೇಕು ಎಂದರೆ ಹೇಗೆ? ಇದು ಉತ್ತರ ಕೊಡತಕ್ಕಂಥ ಒಂದು ವ್ಯವಸ್ಥೆ ಅಲ್ಲವೆಂದು ನನ್ನ ಭಾವನೆ.

ಶ್ರೀ ಟಿ.ಬಿ. ಜಯಚಂದ್ರ : ನಿಮಗೆ ಬೇಕಾಗಿರುವ ಮಾಹಿತಿಯನ್ನು ನಾವು ಒದಗಿಸಿಕೊಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನೀವು ಉತ್ತರ ಕೊಡುತ್ತೇವೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ, ಬೇರೆ ಪ್ರಶ್ನೆ ಕೇಳಬೇಕು ಎಂದರೆ ಪುನಃ ನಾನು ಆ ರೀತಿ ಕೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಸಂಶಯಾಸ್ಪದ ಸಾವುಗಳು ಯಾವ ಸಂದರ್ಭದಲ್ಲಿ ಆಗಿದೆ ಇದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ ನಾವು ಉತ್ತರವನ್ನು ನೀಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ತಾವು ಬೇಕಾದರೆ ಉತ್ತರ ಓದಿರಿ, ಎಲ್ಲಿ ಕೊಟ್ಟಿದ್ದಿರಿ?

ಶ್ರೀ ಟಿ.ಬಿ. ಜಯಚಂದ್ರ : ನಿಮಗೆ ಏನು ಬೇಕು ಅದನ್ನು ಹೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಸಂಶಯಾಸ್ಪದ ಸಾವುಗಳು ಯಾವ ರೀತಿ ಆದವು, ಇದಕ್ಕೇನು ಕಾರಣ?

ಶ್ರೀ ಟಿ.ಬಿ. ಜಯಚಂದ್ರ : ಆ ಬಗ್ಗೆ ವಿವರವನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ಈ ಪ್ರಶ್ನೆಯನ್ನು ನೀವು ತಡೆಹಿಡಿಯಿರಿ. ಮಾನ್ಯ ಗೃಹ ಸಚಿವರು ಬಂದಮೇಲೆ ಇದರ ಬಗ್ಗೆ ಉತ್ತರ ಕೊಡಲಿ, ಏಕೆಂದರೆ, ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾಗಿರುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. Whether Mafia gang of other States is involved in such incidents and if so the action taken by the Department.

ನಾನು ಏಕೆ ಈ ಪ್ರಶ್ನೆಯನ್ನು ತಡೆಹಿಡಿಯಬೇಕು ಎಂದು ಬೇಡಿಕೊಳ್ಳುತ್ತೇನೆಂದರೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಪಕ್ಕದ ಆಂಧ್ರಪ್ರದೇಶದಿಂದ ಬಂದು ಅನುಮಾನಸ್ಪದವಾಗಿ ಹಗಲಿನಲ್ಲಿಯೇ ಸಾಯಿಸಿ ಹೋಗಿರುವುದನ್ನು ಹಿಟ್ ಅಂಡ್ ರನ್ ಕೇಸ್‌ಗಳು ಬಹಳ ಇವೆ. ಈ ವಿಚಾರ ನಮಗೂ ಮತ್ತು ಇಲಾಖೆಗೂ ಗೊತ್ತಿರುವ ವಿಚಾರ. ಬಹುಶಃ ಮಾನ್ಯ ಜಯಚಂದ್ರರವರಿಗೆ

ತಮ್ಮ ಖಾತೆ ಅಲ್ಲದೇ ಇರುವುದರಿಂದ ಈ ವಿಚಾರ ಗೊತ್ತಿಲ್ಲದೇ ಇರಬಹುದು. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಭಯಭೀತರಾಗಿರುವ ಜನಗಳಿಗೆ ಒಂದು ಸಮಾಧಾನ ಆಗಬೇಕಾಗುತ್ತದೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಅವರಿಗೂ ಗೊತ್ತಾಗಬೇಕು ಇದರ ಜೊತೆಗೆ ಪೊಲೀಸ್‌ನವರು ಕೂಡ ಜಾಗೃತರಾಗಬೇಕಾಗುತ್ತದೆ. ಇವತ್ತು ಯಾವ ಸ್ಥಿತಿ ಇದೆ ಎಂದರೆ, ಅಲ್ಲಿ ಕೂಲಿಗೆ ಹೋಗತಕ್ಕಂತ ಜನಗಳನ್ನು ಕೂಡ ಹೋಗಿ ಹೊಡೆಯತಕ್ಕಂಥ, ಅನೇಕ ಘಟನೆಗಳು ನಡೆದಿವೆ. ಹಗಲು ದರೋಡೆ, ಹಗಲಿನಲ್ಲಿ ಬಂದೂಕೂ ತೆಗೆದುಕೊಂಡು ಹೋಗಿ ಸಾಯಿಸಿರತಕ್ಕಂಥ ಘಟನೆಗಳು ನಡೆದಿವೆ. ಇದರಿಂದಾಗಿಯೇ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಆದ್ದರಿಂದ ಇದನ್ನು ತಡೆಹಿಡಿದು ಮಾನ್ಯ ಗೃಹಮಂತ್ರಿಗಳಿಂದ ಉತ್ತರ ಕೊಡಿಸಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾಫೀಯಾ ಬಗ್ಗೆ ಕೇಳಿದ್ದಾರೆ ಇದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೇವೆ. ಆ ಭಾಗದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಅದು ನಡೆಯುತ್ತದೆಂದು ಪೂರಕವಾಗಿ ಪ್ರಶ್ನೆ ಕೇಳಿದಾಗ ನಾನು ಉತ್ತರಿಸುವುದಕ್ಕೆ ತಯಾರಿದ್ದೇನೆ. ನಾನು ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದೇನೆ. ತಾವು ಹೇಳುವ ರೀತಿಯಲ್ಲಿ ಮಾಫೀಯಾ ಪ್ರಕರಣಗಳು ಇದೆ ಎಂದು ಸರ್ಕಾರದ ಗಮನಕ್ಕೆ ತರುವುದಾದರೆ ಆ ಬಗ್ಗೆ ಕೂಡ ಖಂಡಿತವಾಗಿ ಸರ್ಕಾರ ಗಮನ ಹರಿಸುತ್ತದೆ. ಇದಕ್ಕಾಗಿ ಪ್ರಶ್ನೆಯನ್ನು ಮುಂದಕ್ಕೆ ಹಾಕುವ ಅವಶ್ಯಕತೆ ಇಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಆ ಪ್ರಶ್ನೆಯಲ್ಲಿ ಇದು ಅಡಕವಾಗಿದೆ, ಅದಕ್ಕಾಗಿಯೇ ನಾನು ಸರ್ಕಾರದ ಗಮನವನ್ನು ಸೆಳೆದಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರ ಪ್ರಶ್ನೆಗೆ ಅನುಗುಣವಾಗಿ ನಾನೇ ಉಪ ಪ್ರಶ್ನೆ ಕೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳ ಹತ್ತಿರ ಬಂದಮೇಲೆ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ರಾಯಚೂರು ಮತ್ತು ಕೊಪ್ಪಳದಲ್ಲಿ ಏಕೆ ಈ ರೀತಿ ಆಗುತ್ತದೆ ಎನ್ನುವ ಎರಡು ಮೂರು ವಿಚಾರಗಳನ್ನು ನಾವು ತಿಳಿದುಕೊಳ್ಳೋಣ. ನಾನು ಈ ಪ್ರಶ್ನೆಯನ್ನು ರಾಜ್ಯದ ಜನತೆಯ ದೃಷ್ಟಿಯಿಂದ ಕೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು ಇದನ್ನು ತಡೆಹಿಡಿದಿದ್ದೇನೆ.

ಕುಡಿಯುವ ನೀರಿನ ಯೋಜನೆಗಳಿಗೆ ಅಸಮರ್ಪಕ ವಿದ್ಯುತ್ ಸರಬರಾಜು ಮಾಡುತ್ತಿರುವ ಬಗ್ಗೆ

240 (2159) ಶ್ರೀ ನಾರಾಯಣ ಆರ್. (ಬೆಳ್ಳಾವಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಾದ ಕಿರುನೀರು ಸರಬರಾಜು ಯೋಜನೆ, ಎಆರ್‌ಡಬ್ಲುಎಸ್, ಎನ್‌ಆರ್‌ಡಬ್ಲುಎಸ್ ಮತ್ತು ವಿಶ್ವಬ್ಯಾಂಕ್ ನೆರವಿನ ನೀರು ಸರಬರಾಜು ಯೋಜನೆಗೆ ಸಮರ್ಪಕ ವಿದ್ಯುತ್ ಸರಬರಾಜಿಲ್ಲದೆ ಕುಡಿಯುವ ನೀರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;